# ಶ್ರೀಮಾತೆ ಶಾರದಾದೇವಿಯವರ ನೆನಪುಗಳು

ಬಂಗಾಳಿ ಮೂಲ: **ಸ್ವಾಮಿ ಅಂಬಾನಂದ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

(ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದ ಶಿಷ್ಯರಾಗಿದ್ದರು ಸ್ವಾಮಿ ಅಂಬಾನಂದರು. ಅವರ ಪೂರ್ವಾಶ್ರಮವಿದ್ದುದು ಕೇರಳದ ತಿರುವಾಂಕೂರಿನಲ್ಲಿ. ಸಿ.ಮಧುರನ್ ಪಿಳ್ಳೈ ಎಂಬುದು ಅವರ ಹಿಂದಿನ ಹೆಸರು. ಈ ಸ್ಮೃತಿಕಥೆಯಲ್ಲಿ ಉಲ್ಲೇಖಿತವಾಗಿರುವ ಅವರ ತಮ್ಮನ ಹೆಸರು ಸಿ. ದಾಮೋದರನ್ ಪಿಳ್ಳೈ. 'ವೇದಾಂತ ಕೇಸರಿ' ಆಂಗ್ಲ ಪತ್ರಿಕೆಯ ೧೯೫೩ರ ಡಿಸೆಂಬರ್ ಸಂಚಿಕೆಯಲ್ಲಿ *(ಪು.೩೨೯ -೩೩೦)* ಪ್ರಕಟವಾದ ಇಂಗ್ಲಿಷ್ ಲೇಖನದ ಅನುವಾದವಿದು. *(-ಅನು.)*)

ಅದು ೧೯೧೪ರ ಸೆಪ್ಟೆಂಬರ್ ೧೯ನೇ ತಾರೀಖಿನ ಶನಿವಾರ; ಪಾಡ್ಯದ ದಿನ. ಮೊದಲ ಬಾರಿಗೆ ಶ್ರೀಮಾತೆ ಶಾರದಾದೇವಿಯವರನ್ನು ಭೇಟಿಯಾಗುವ ಸೌಭಾಗ್ಯ ಅಂದೇ ನನಗೊದಗಿಬಂತು. ನಾನು ಮತ್ತು ನನ್ನ ತಮ್ಮ ದಾಮೋದರನ್ ಇಬ್ಬರೂ ಬೇಲೂರು ಮಠದ ಒಂದು ಕೋಣೆಯಲ್ಲಿ ಉಳಿದುಕೊಂಡಿದ್ದೆವು. ಅಲ್ಲಿಗೇ ಬಂದ ಸ್ವಾಮಿ ನಿರ್ಮಲಾನಂದರು ಹೇಳಿದರು: ''ನಾಳೆ ನೀವಿಬ್ಬರೂ ಶ್ರೀಮಾತೆಯವರ ದರ್ಶನ ಪಡೆಯುವ ಪುಣ್ಯ ದಿನ. ಬೆಳಿಗ್ಗೆ ಸ್ನಾನ ಮಾಡಿ ಬನ್ನಿ. ಆದರೆ ತಿಂಡಿ ಏನೂ ತಿನ್ನಬೇಡಿ. ಸ್ವಲ್ಪ ಹೂಗಳನ್ನು ತೆಗೆದುಕೊಂಡು ಬ್ರಹ್ಮಚಾರಿ ಗೋವಿಂದಜಿ ಜೊತೆಗೆ ಶ್ರೀಮಾತೆಯವರ ಬಳಿಗೆ ಹೋಗಿ. ಮಧ್ಯಾಹ್ನ ಊಟವಾದ ಮೇಲೆ ಬೇಕಾದರೆ ದಕ್ಷಿಣೇಶ್ವರಕ್ಕೆ ಹೋಗಿ, ಅಲ್ಲಿ ಪೂಜೆ ಎಲ್ಲ ಮುಗಿಸಿ ಸಾಯಂಕಾಲದ ಹೊತ್ತಿಗೆ ಬೇಲೂರು ಮಠಕ್ಕೆ ಮರಳಿ ಬನ್ನಿ.'' ಅಂತೆಯೇ ನಾವು ಶನಿವಾರ ಬೆಳಿಗ್ಗೆ ಸ್ನಾನ ಮಾಡಿದೆವು, ಹೂಗಳನ್ನು ಕೊಯ್ದು ಸಂಗ್ರಹಿಸಿದೆವು; ಶ್ರೀರಾಮಕೃಷ್ಣರ ಹಾಗೂ ಸ್ವಾಮೀಜಿಯವರ ಮಂದಿರಗಳಲ್ಲಿ ನಮಸ್ಕಾರ ಮಾಡಿ ಬಂದೆವು. ಅನಂತರ ಸ್ವಾಮಿ ಪ್ರೇಮಾನಂದಜಿಯವರಿಗೆ ಪ್ರಣಾಮ ಮಾಡಿ, ಬಳಿಕ ಗೋವಿಂದಜಿಯವರೊಂದಿಗೆ 'ಉದ್ಬೋಧನ ಕಾರ್ಯಾಲಯ'ಕ್ಕೆ ಹೋದೆವು. ಶ್ರೀಮಾತೆಯವರ ಸನ್ನಿಧಿಯನ್ನು ತಲಪುವ ಮೊದಲೇ ಗೋವಿಂದಜಿ ಇನ್ನೂ ರಸ್ತೆಯಲ್ಲಿದ್ದಾಗಲೇ 'ಉದ್ಬೋಧನ'ದ ಕೆಳಅಂತಸ್ತಿನ ಗೋಡೆಗೆ ತಲೆಯನ್ನು ಮುಟ್ಟಿಸಿ ನಮಸ್ಕಾರ ಮಾಡಿದರು. ಅವರ ಭಕ್ತಿಯನ್ನು ಮೆಚ್ಚಿಕೊಂಡ ನಾವು, ಅವರಂತೆಯೇ ನಮಸ್ಕರಿಸಿದೆವು. 'ಉದ್ಬೋಧನ'ವನ್ನು ಪ್ರವೇಶಿಸಿದ ನಾವು, ಎಡಭಾಗದಲ್ಲಿ – ಪೂರ್ವಭಾಗದ ಕೋಣೆಯಲ್ಲಿ ಕುಳಿತಿದ್ದ ಸ್ವಾಮಿ ಶಾರದಾನಂದರಿಗೆ ನಮಸ್ಕರಿಸಿದೆವು. ಅವರ ಬಳಿ ಸ್ವಲ್ಪ ಹೊತ್ತು ಮಾತನಾಡುತ್ತಿದ್ದು, ಬಳಿಕ 'ಉದ್ಬೋಧನ ಕಾರ್ಯಾಲಯ'ದ ಮ್ಯಾನೇಜರ್ ಅವರ ಕೋಣೆಗೆ ಹೋದೆವು. ''ನೀವು ದಯವಿಟ್ಟು ಇಲ್ಲೇ ಕುಳಿತಿರಿ. ಶ್ರೀಮಾತೆಯವರ ಪೂಜೆ ಮುಗಿದ ನಂತರ ಅವರನ್ನು ನೀವು ಭೇಟಿಯಾಗಬಹುದು'' ಎಂದರು ಮ್ಯಾನೇಜರ್. ನಾವು ಹಾಗೆಯೇ ಮಾಡಿದೆವು.



ಬೆಳಿಗ್ಗೆ ೯ರ ನಂತರ ಶ್ರೀಮಾತೆಯವರ ಪೂಜೆ ಮುಗಿಯಿತು. ಕೂಡಲೇ ಶ್ರೀಮಾತೆಯವರ ದರ್ಶನಕ್ಕಾಗಿ ನಮ್ಮನ್ನು ಕರೆದರು. ಅಲ್ಲಿಗೆ ಮೊದಲು ಹೋದವನೇ ನಾನು. ಪೂಜಾಗೃಹವನ್ನು ಪ್ರವೇಶ ಮಾಡಿದ ಕೂಡಲೇ ಅಲ್ಲಿ ನಾನು ಹಾಸಿಗೆಯ ಪೀಠದಲ್ಲಿ ಇರಿಸಲಾಗಿದ್ದ ಶ್ರೀರಾಮಕೃಷ್ಣರ ಭಾವಚಿತ್ರವನ್ನು ನೋಡಿದೆ. ಅದನ್ನು ಪೂರ್ವಾಭಿಮುಖವಾಗಿ ಇರಿಸಲಾಗಿತ್ತು. ಅದರ ಮುಂದೆ ನಾನು ನಮಸ್ಕರಿಸಿದೆ. ನಂತರ ನಾನು ಶ್ರೀಮಾತೆಯವರಿಗೆ ನಮಸ್ಕರಿಸಿದೆ. ತಮ್ಮ ಎಡಭಾಗದಲ್ಲಿ ಕುಳಿತುಕೊಳ್ಳಲು ಅವರು ಹೇಳಿದರು. ಅವರು ಉತ್ತರಕ್ಕೆ ಅಭಿಮುಖವಾಗಿ ಕುಳಿತಿದ್ದರು. ಬಳಿಕ ಅವರು ಶ್ರೀರಾಮಕೃಷ್ಣರನ್ನು ಪೂಜಿಸಿ, ನನ್ನ ಕೈಗೆ ತೀರ್ಥ ನೀಡಿದರು. ಅದನ್ನು ಕುಡಿಯಲು ಕೊಟ್ಟಿದ್ದರೆಂದು ನನಗೆ ತಿಳಿದಿರಲಿಲ್ಲ. ನನ್ನ ತಂದೆಯ ಶ್ರಾದ್ಧದ ಸಂದರ್ಭದಲ್ಲಿ ನಾನು ತೀರ್ಥವನ್ನು ನನ್ನ ತಲೆಗೆ ಕಣ್ಣಿಗೆ ಸಿಂಪಡಿಸಬೇಕಿತ್ತು.

ಅದೇ ರೀತಿ ನಾನು ಶ್ರೀಮಾತೆ ಕೊಟ್ಟ ತೀರ್ಥವನ್ನು ಸಿಂಪಡಿಸಿದೆ. ಆಗ ಅವರು ಒಂದು ಪಾತ್ರೆಯಿಂದ ತುಸು ನೀರನ್ನು ತೆಗೆದು ಕುಡಿಯಲು ಹೇಳಿದರು. ಆದರೆ ಕುಶ(ದರ್ಭೆ)ದಿಂದ ಮಾಡಿದ ಚಮಚದಲ್ಲಿ ಸಾಕಷ್ಟು ನೀರು ನಿಲ್ಲುತ್ತಿರಲಿಲ್ಲ; ಹಾಗಾಗಿ ಮೂರು ನಾಲ್ಕು ಸಲ ನೀರಿನಲ್ಲಿ ಅದನ್ನು ಮುಳುಗಿಸಿ ತೆಗೆದುಕೊಂಡರೂ, ಕೆಲವೇ ಕೆಲವು ಹನಿ ನೀರನ್ನಷ್ಟೇ ಕುಡಿಯಲು ನನಗೆ ಸಾಧ್ಯ ವಾಯಿತು, ಅದರಿಂದಲೇ ತೃಪ್ತಿಪಟ್ಟುಕೊಂಡೆ. ಬಳಿಕ ಶ್ರೀಮಾತೆ ಯವರು ನನಗೆ ಮಂತ್ರಜಪ ಮಾಡಲು ಶ್ರೀರಾಮಕೃಷ್ಣರ ಮಂತ್ರ ದೀಕ್ಷೆ ನೀಡಿದರು. ಶ್ರೀಮಾತೆಯವರು ಬಲಗೈ ಬೆರಳುಗಳ ಮೂಲಕ ಜಪ ಮಾಡುವ ವಿಧಾನವನ್ನು ಮೂರು ಸಲ ಮಾಡಿ ತೋರಿಸಿದರು. ಈ ರೀತಿಯಲ್ಲಿ ಒಂದು ಸಲ ಮಾಡಿದರೆ ಹತ್ತು ಬಾರಿ ನಾಮಜಪ ಮಾಡಿದಂತಾಗುವುದು. ಅವರು ಮಂತ್ರಜಪ ಮಾಡಲು ಜಗನ್ಮಾತೆಯ ನಾಮವನ್ನು ಉಪದೇಶಿಸಿದರು. ಬಳಿಕ ಅವರು 'ಗುರುದಕ್ಷಿಣೆ ನೀಡು' ಎಂದರು. ನಾನು ನನ್ನ ಬಟ್ಟೆಯ ತುದಿಯಲ್ಲಿ ಕಟ್ಟಿಕೊಂಡಿದ್ದ (ಒಂದು ರೂಪಾಯಿಯ) ನಾಣ್ಯ ವನ್ನು ಹೊರತೆಗೆಯುತ್ತಿದ್ದಾಗ ನನ್ನಲ್ಲಿ ಒಂದು ಆಲೋಚನೆ ಮೂಡಿ ಬಂತು; ಯಾವುದೇ ಒಂದು ನಾಣ್ಯವನ್ನು ಸ್ಪರ್ಶಿಸ ಲಾಗದ, ಹಾಗೂ ಸ್ಪರ್ಶವನ್ನೇ ಮಾಡದ ವ್ಯಕ್ತಿಯೊಬ್ಬರ ಪತ್ನಿಯ ಕೈಗೆ ಈ ನಾಣ್ಯವನ್ನು ಹೇಗೆ ಕೊಡಲಿ? ಎಂದು. ಹಾಗಾಗಿ ನಾನು ನಾಣ್ಯವನ್ನು ಶ್ರೀಮಾತೆಯವರ ಎಡ ಪಾದದ ಬಳಿ ಇಟ್ಟೆ. ಆ ಕ್ಷಣದಲ್ಲೇ ಅವರು ನನ್ನ ಮನಸ್ಸನ್ನು ತಿಳಿದುಕೊಂಡು, ಆದರ ದಿಂದ ಆ ನಾಣ್ಯವನ್ನು ತೆಗೆದುಕೊಂಡು, ಬಳಿಕ ಪಕ್ಕಕ್ಕೆ ಸರಿಸಿ ಇಟ್ಟರು. ಈ ರೀತಿ ಅವರು ಅದನ್ನು ಸ್ವೀಕರಿಸಿದ್ದಾಗಿ ನನಗೆ ತಿಳಿಸಿ ಕೊಟ್ಟರು. ಅನಂತರ ನಾನು ಅವರ ಮುಂದೆ ಭಕ್ತಿಯಿಂದ ನಮ ಸ್ಕಾರ ಮಾಡುತ್ತ ಈ ರೀತಿ ಆಲೋಚಿಸಿದೆ, ''ಅಮ್ಮಾ, ನೀವು ಕೃಪೆ ತೋರಿ ನಿಮ್ಮ ಪಾದವನ್ನು ಮೇಲಕ್ಕೆತ್ತಿದರೆ, ಅದನ್ನು ನಾನು ಭಕ್ತಿಯಿಂದ ನನ್ನ ತಲೆಯ ಮೇಲಿಟ್ಟುಕೊಂಡು ಧನ್ಯನಾಗು ವೆನು.'' ಕೂಡಲೇ ಅವರು ಅದೇ ರೀತಿ ಮಾಡಿದರು. ಅವರ ಪಾದಕಮಲಗಳನ್ನು ನನ್ನ ತಲೆಯಮೇಲಿಟ್ಟುಕೊಂಡು, ನಿಜವಾ ಗಿಯೂ ನನಗೆ ಧನ್ಯತಾಭಾವವುಂಟಾಯಿತು. ನಮಸ್ಕಾರ ಮಾಡು ತ್ತಿದ್ದ ಆ ಸ್ಥಿತಿಯಲ್ಲೇ ನಾನು ಶ್ರೀಮಾತೆಯವರಿಗೆ ಹೇಳಿದೆ: ''ನನಗೆ ಪಾವಿತ್ರ್ಯ ಮತ್ತು ಭಕ್ತಿಯನ್ನು ದಯಪಾಲಿಸಿ.'' ಹಿಂದಿನ ರಾತ್ರಿ ಮಲಗಿಕೊಂಡಿದ್ದಾಗ ನಾನು ಈ ಪ್ರಶ್ನೆಯನ್ನು ಶ್ರೀಮಾತೆ ಯವರ ಬಳಿ ಕೇಳಬೇಕೆಂದು ನಿರ್ಧರಿಸಿಕೊಂಡಿದ್ದೆ. ಮರುಕ್ಷಣ ದಲ್ಲೇ ಶ್ರೀಮಾತೆಯವರು ಒಂದು ಹೂವನ್ನು ತೆಗೆದುಕೊಂಡು, ಅದನ್ನು ನನ್ನ ತಲೆಯ ಮೇಲಿಟ್ಟು, ''ನೀನು ಏನನ್ನು ಕೇಳಿ ಕೊಂಡಿದ್ದೀಯೋ ಅದನ್ನು ಶ್ರೀ ಗುರುಮಹಾರಾಜರು (ಶ್ರೀ ರಾಮಕೃಷ್ಣರು) ನಿನಗೆ ನೀಡುವರು'' ಎಂದರು. ಅದರಿಂದ ನನಗೆ ಸಮಾಧಾನ, ತೃಪ್ತಿ ದೊರೆಯಿತು. ಆ ಹೂವನ್ನು ಸುರಕ್ಷಿತ ವಾಗಿ ನಾನು ಇಟ್ಟುಕೊಂಡೆ; ಸ್ವಲ್ಪ ಸ್ವಲ್ಪವೇ ಅದನ್ನು ತಿನ್ನುತ್ತ ಎರಡು-ಮೂರು ದಿನಗಳಲ್ಲಿ ಅದನ್ನು ಪೂರ್ತಿಯಾಗಿ ತಿಂದು ಬಿಟ್ಟೆ. ಶ್ರೀಮಾತೆಯವರು ಸ್ವಲ್ಪ ಹೊತ್ತು ಜಪ ಮಾಡಲು ಹೇಳಿ ದರು. ತುಸು ಉನ್ಮತ್ತ ಭಾವದಿಂದ್ದ ನಾನು ಮೈಮರೆತು, ಮಂತ್ರ ವನ್ನು ಜೋರಾಗಿ ಜಪಿಸತೊಡಗಿದೆ. ಆಗ ಶ್ರೀಮಾತೆಯವರು ತಮ್ಮ ತುಟಿಗಳ ಮೇಲೆ ಕೈಯಿಟ್ಟು, ''ನಿಧಾನವಾಗಿ; ಸದ್ದಿಲ್ಲದೆ ಜಪ ಮಾಡು'' ಎಂದರು. ಅವರು ಹೇಳಿದಂತೆಯೇ ಮಾಡಿದ ನಾನು ಮತ್ತೆ ಅವರ ಮುಂದೆ ನಮಸ್ಕರಿಸಿದೆ. ಅವರು ಹೇಳಿ ದರು, ''ಹೊರಗೆ ಹೋಗಿ ನಿನ್ನ ತಮ್ಮನನ್ನು ಕಳುಹಿಸು.'' ನಾನು ಹಾಗೆಯೇ ಮಾಡಿದೆ.

ನನ್ನ ತಮ್ಮ ಮರಳಿ ಬಂದ ಮೇಲೆ ನಾವಿಬ್ಬರೂ ಮ್ಯಾನೇಜರ್ ಅವರ ಕೋಣೆಗೆ ಹೋಗಿ, ಅಲ್ಲಿ ಮೌನವಾಗಿ ಜಪ ಮಾಡಿದೆವು. ಮಧ್ಯಾಹ್ನ ನಾವು ಸ್ವಾಮಿ ಶಾರದಾನಂದರೊಂದಿಗೆ ಊಟಕ್ಕೆ ಕುಳಿ ತೆವು. ಅಲ್ಲಿ ಶ್ರೀಮಾತೆಯವರ ಸುಂದರವಾದ ಒಂದು ಭಾವಚಿತ್ರ ವಿತ್ತು. ಊಟ ಬಡಿಸಲಾಯಿತು; ಎಲ್ಲರೂ ಆಹಾರ ಸ್ವೀಕರಿಸಿ ದರು. ಆದರೆ ನಾವಿಬ್ಬರು-ಅಂದರೆ ನಾನು ಹಾಗೂ ನನ್ನ ತಮ್ಮ ಸ್ವೀಕರಿಸಲಿಲ್ಲ; ಶ್ರೀಮಾತೆಯವರ ಪ್ರಸಾದ ಸ್ವೀಕರಿಸಿದ ನಂತರವೇ ನಾವು ಊಟ ಮಾಡುವುದೆಂದು ಕಾಯುತ್ತಿದ್ದೆವು. ಶ್ರೀರಾಮ ಕೃಷ್ಣರ ಸೊಸೆ ಲಕ್ಷ್ಮೀ ದೀದಿ ನಮ್ಮ ಆಸೆಯನ್ನು ಪೂರೈಸಿದಳು. ನಮಗೆ ಬಡಿಸುತ್ತಿದ್ದ ಅವಳು ಹೇಳಿದಳು: ''ಹುಡುಗರೇ, ಶ್ರೀಮಾತೆ ಯವರು ಇನ್ನೂ ಊಟಕ್ಕೆ ಕುಳಿತಿಲ್ಲ. ಆದರೆ ಅವರಿಗೆ ಬಡಿಸಿದ್ದಾ ಗಿದೆ. ನಿಮಗೆ ಬಡಿಸಲು ಅವರು ನಮಗೆ ಹೇಳಿದ್ದಾರೆ. ಅವರು ಊಟ ಮಾಡಲು ಆರಂಭಿಸಿದ ನಂತರ, ನಿಮಗೆ ಅವರ ಪ್ರಸಾದ ವನ್ನು ತರುತ್ತೇನೆ. ಅಲ್ಲಿಯವರೆಗೆ ನೀವು ಊಟ ಮಾಡುತ್ತಿರಿ.'' ಸ್ವಲ್ಪ ಹೊತ್ತಿನ ನಂತರ ಅವಳು ಶ್ರೀಮಾತೆಯವರ ಪ್ರಸಾದವನ್ನು ತಂದಳು. ಎರಡು ಉಂಡೆ ಅನ್ನ; ಅದನ್ನು ತುಪ್ಪ ಹಾಗೂ ಹೆಸರು ಕಾಳಿನೊಂದಿಗೆ ಕಲೆಸಿ ತಂದಿದ್ದಳು. ಅದನ್ನು ನಾವು ಭಕ್ತಿ ಪೂರ್ವಕ ಸ್ವೀಕರಿಸಿದೆವು. ಸಂಜೆ ನಾವು ಶ್ರೀಮಾತೆಯವರಿಂದ ಬೀಳ್ಕೊಂಡು, ದಕ್ಷಿಣೇಶ್ವರಕ್ಕೆ ಹೊರಟೆವು.

* * * *

ಹತ್ತು ದಿನಗಳ ನಂತರ, ಅಂದರೆ ದುರ್ಗಾಪೂಜೆಯ ವಿಜಯದಶಮಿಯ ದಿನ, ಬೆಳಿಗ್ಗೆ ಸ್ನಾನ ಮಾಡಿ 'ಉದ್ಬೋಧನ'ಕ್ಕೆ ಹೋದೆವು. ಅಲ್ಲಿ ರಾಸಬಿಹಾರಿ ಮಹಾರಾಜರನ್ನು ಕೇಳಿಕೊಂಡೆವು – ಒಳ್ಳೆಯ ಸಿಹಿತಿಂಡಿ ಏನಾದರೂ ಕೊಂಡುಕೊಂಡು ಶ್ರೀಮಾತೆ ಯವರಿಗೆ ಅರ್ಪಿಸುವಂತೆ. ಅನಂತರ ನಾವು ಮ್ಯಾನೇಜರರ ಕೋಣೆಯಲ್ಲಿ ಕುಳಿತೆವು. ಶ್ರೀಮಾತೆಯವರ ಪೂಜೆ ಮುಗಿದ ನಂತರ ನಾವು ಅವರ ಬಳಿಗೆ ಹೋಗಿ, ನಮಸ್ಕರಿಸಿದೆವು. ಮಧ್ಯಾಹ್ನ ನಾವು ಅಲ್ಲೇ ಊಟ ಮಾಡಿ, ಬಳಿಕ ದಕ್ಷಿಣೇಶ್ವರಕ್ಕೆ ಹೋಗಿ, ಅಲ್ಲಿ ಪೂಜೆ ಮಾಡಿ, ಸಂಜೆ ೬-೦೦ಕ್ಕೆ ಬೇಲೂರು ಮಠಕ್ಕೆ ಮರಳಿ ಬಂದೆವು.

ಒಂದು ದಿನ ಸಂಜೆ ನಾವು ಶ್ರೀಮಾತೆಯವರನ್ನು ಭೇಟಿ ಯಾಗಲು ಕೆಲವು ಜನರೊಂದಿಗೆ ಹೊರಟೆವು. ಅಂದು ಶ್ರೀಮಾತೆ

ಯವರು ನಮ್ಮೊಂದಿಗೆ ಮಾತನಾಡಲಿಲ್ಲ. ನನಗೆ ದುಃಖವಾಯಿತು. ಆಗ ಶ್ರೀಮಾತೆಯವರು ನನ್ನತ್ತ ತಿರುಗಿ, ಪ್ರೀತಿಯಿಂದ ನಸುನಗೆ ಬೀರಿದರು.

ನಾವು ಕಾಶಿಗೆ ಯಾತ್ರೆ ಹೊರಡುವ ಮುನ್ನ ಶ್ರೀಮಾತೆಯವರಿಂದ ಬೀಳ್ಕೊಳ್ಳಲು ಅವರ ಬಳಿಗೆ ಹೋದೆ. ಆಗ ಅವರು ಹದಿನೈದು ನಿಮಿಷಗಳವರೆಗೆ ಅನೇಕ ವಿಷಯಗಳನ್ನು ಕೇಳುತ್ತ ಮಾತನಾಡಿದರು. ಅವರು ಕೇಳಿದರು, ''ನೀನು ಈ ಮೊದಲು ಕಾಶಿಗೆ ಹೋಗಿದ್ದೀಯಾ? ನಿನ್ನ ಜೊತೆಗೆ ಯಾರಿದ್ದಾರೆ? ಅಲ್ಲಿ ಎಷ್ಟು ದಿನ ಇರುತ್ತೀಯಾ? ಅಲ್ಲಿಂದ ನೀನು ಇಲ್ಲಿಗೆ ಬರುತ್ತೀಯಾ, ಅಥವಾ ನಿನ್ನ ಊರಿಗೆ ಹೋಗುತ್ತೀಯಾ? ಯಾತ್ರೆಗೆ ಬೇಕಾದಷ್ಟು ದುಡ್ಡು ನಿನ್ನ ಬಳಿ ಇದೆಯೆ? ಇಲ್ಲದಿದ್ದರೆ ನಾನು ಕೊಡುತ್ತೇನೆ. ಕೇಳುವುದಕ್ಕೆ ಹಿಂಜರಿಯಬೇಡ. ನಿನಗೆ ಆಗುವುದಿದ್ದರೆ ಮಾತ್ರ ಅದನ್ನು ಮರಳಿ ಕೊಡು, ಸಾಕು. ರಾಖಾಲ್ (ಸ್ವಾಮಿ ಬ್ರಹ್ಮಾನಂದಜಿ) ಅಲ್ಲಿದ್ದಾನೆ. ನೀನು ನನಗೋಸ್ಕರ ಒಂದು ಕೆಲಸ ಮಾಡಬಲ್ಲೆಯಾ? ರಾಖಾಲನಿಗೆ ನೀನು ನನ್ನ ಆಶೀರ್ವಾದವನ್ನು ತಿಳಿಸಬೇಕು. ಹಾಗೆ ಮಾಡಿದರೆ ನನಗೆ ಆನಂದವಾಗುತ್ತದೆ. ಬೇಲೂರು ಮಠಕ್ಕೆ ಮರಳಿ ಬಂದ ಮೇಲೆ ತಡಮಾಡದೆ ಇಲ್ಲಿಗೆ ಬಾ.'' ಈ ರೀತಿ ನಮ್ಮೊಂದಿಗೆ ತುಂಬಾ ಪ್ರೀತಿಯಿಂದ ಮಾತನಾಡಿದರು. ನಮಗೆಲ್ಲ ಹೇಳಲಾರದಷ್ಟು ಆನಂದವುಂಟಾಯಿತು. ನನ್ನ ತಾಯಿಯನ್ನು ಕಳೆದುಕೊಂಡಿದ್ದು ನನಗೆ ಮರೆತೇ ಹೋಯಿತು. ಶ್ರೀಮಾತೆಯವರ ಕೆನ್ನೆ ನನಗೆ ನನ್ನ ತಾಯಿಯ ನೆನಪನ್ನು ತಂದಿತು. ಎಲ್ಲ ತಾಯಂದಿರ ಪ್ರೀತಿ ಶ್ರೀಮಾತೆಯವರ ಪ್ರೀತಿಯಂತಿದ್ದರೆ, ಜಗತ್ತೆಲ್ಲವೂ ಆನಂದದ ಧಾಮವಾಗಿಬಿಡುತ್ತಿತ್ತು.

ನಾವು ಕಾಶಿಗೆ ಹೋಗಿ, ಸ್ವಾಮಿ ಬ್ರಹ್ಮಾನಂದರಿಗೆ ನಮಸ್ಕರಿಸಿದೆವು. ಶ್ರೀಮಾತೆಯವರು ಹೇಳಿದ್ದನ್ನು ತಿಳಿಸಲು ಅವಕಾಶಕ್ಕಾಗಿ ನಾನು ಕಾಯುತ್ತಿದ್ದೆ. ಎರಡು-ಮೂರು ದಿನಗಳ ನಂತರ ನಾನು ಸ್ವಾಮಿ ಬ್ರಹ್ಮಾನಂದರು ಒಬ್ಬರೇ ಇದ್ದುದನ್ನು ಕಂಡೆ. ನಾನು ಅವರ ಬಳಿಗೆಹೋಗಿ ನಮಸ್ಕರಿಸಿ ಹೇಳಿದೆ: ''ನಾನು ನಿಮಗೆ ಒಂದು ವಿಷಯವನ್ನು ತಿಳಿಸಬೇಕು, ಮಹಾರಾಜ್. ನನ್ನ ಕರ್ತವ್ಯವನ್ನು ಹೇಗೆ ಹೇಗೆ ಮಾಡಬೇಕೋ ಗೊತ್ತಾಗಲ್ಲ. ಒಂದು ವೇಳೆ ತಪ್ಪಿದ್ದಲ್ಲಿ ನನ್ನನ್ನು ಕ್ಷಮಿಸಬೇಕು.'' ಅವರೆಂದರು, ''ಕ್ಷಮೆ ಕೇಳಿದ್ದು ಸಾಕು. ಏನು ಹೇಳಬೇಕಾಗಿದೆಯೋ ಅದನ್ನು ಒಂದೇ ಸಲ ಹೇಳಿಬಿಡು.'' ಶ್ರೀಮಾತೆಯವರು ತಿಳಿಸಿದ್ದನ್ನು ನಾನು ಅವರಿಗೆ ತಿಳಿಸಿದೆ. ಅವರು ಪ್ರೀತಿ-ಭಕ್ತಿಪೂರ್ವಕವಾಗಿ ತಲೆಯನ್ನು ಬಾಗಿಸಿ, ಶ್ರೀಮಾತೆಯವರ ಆಶೀರ್ವಾದವನ್ನು ಭಕ್ತಿಯಿಂದ ಸ್ವೀಕರಿಸಿದ್ದನ್ನು ವ್ಯಕ್ತಪಡಿಸಿದರು. ಅನಂತರ ಅವರೆಂದರು, ''ನೀನು ಮತ್ತೆ ಶ್ರೀಮಾತೆಯವರನ್ನು ಕಂಡಾಗ, ಅವರ ಆಶೀರ್ವಾದ ಗಳನ್ನು ಪಡೆದು ನಾನು ಧನ್ಯತಾಭಾವವನ್ನು ಹೊಂದಿದೆ ಎಂದು ತಿಳಿಸಿದ್ದಾಗಿ ಹೇಳು. ಅಷ್ಟೇ ಅಲ್ಲ, ನನ್ನ ಪರವಾಗಿ ನೀನು ಅವರ ಮುಂದೆ ಭಕ್ತಿಪೂರ್ವಕ ನಮಸ್ಕಾರ ಮಾಡಬೇಕು.'' ಶ್ರೀಮಾತೆಯವರ ಕೃಪೆಯಿಂದ ನನ್ನ ಕರ್ತವ್ಯವನ್ನು ನಾನು ಚೆನ್ನಾಗಿ ನಿರ್ವಹಿಸಿದೆ.

ಇನ್ನೊಂದು ಬಾರಿ ನಾನು ರುದ್ರಾಕ್ಷಿ ಮಾಲೆಯನ್ನು ಪಡೆಯಲು ಶ್ರೀಮಾತೆಯವರ ಬಳಿಗೆ ಹೋದೆ. ಅವರು ಒಬ್ಬರೇ ಇದ್ದರು. ನನಗೆ ಅವರು ಮಾಲೆಯನ್ನು ಕೊಟ್ಟರು. ನಾನು ಮಲಯಾಳಂನಲ್ಲಿ ಪ್ರಾರ್ಥಿಸಿಕೊಂಡೆ: ''ಅಮ್ಮಾ, ಈ ಮಾಲೆಯನ್ನು ನಿಮ್ಮ ಕೊರಳಲ್ಲಿ ಧರಿಸಬೇಕೆಂದು ನನ್ನಾಸೆ''. ಆ ಕ್ಷಣದಲ್ಲೇ ಅವರು ಕತ್ತನ್ನು ಬಾಗಿಸಿದರು; ನಾನು ಭಕ್ತಿಯಿಂದ ಅದನ್ನು ಅವರ ಕೊರಳಿಗೆ ಹಾಕಿದೆ. ಅದನ್ನು ಕೂಡಲೇ ನನಗೆ ಮರಳಿ ಕೊಡಬೇಕೆಂದಿದ್ದರು; ಆಗ ನಾನು ಮತ್ತೆ ಮಲಯಾಳಂನಲ್ಲಿ ಹೇಳಿದೆ, ''ಅದು ಅಲ್ಲೇ ಸ್ವಲ್ಪ ಹೊತ್ತು ಇರಲಿ.'' ಆಗ ನನ್ನ ತಮ್ಮ ಅವರ ಬಳಿ ಕರಜಪ ಮಾಡುವ ಬಗ್ಗೆ ಒಂದು ಪ್ರಶ್ನೆ ಕೇಳಿದ. ಅವನಿಗೆ ತೃಪ್ತಿಯಾಗುವಂತೆ ವಿವರಿಸಿ ಉತ್ತರ ನೀಡುವವರೆಗೂ ಅವರು ಮಾಲೆಯನ್ನು ಧರಿಸಿದ್ದರು. ಅನಂತರ ಅದನ್ನು ತೆಗೆದು, ನನಗೆ ಕೊಡುವಷ್ಟರಲ್ಲಿ ನಾನೆಂದೆ, ''ದಯವಿಟ್ಟು ಸ್ವಲ್ಪ ಜಪ ಮಾಡಿ. ಅನಂತರ ಅದನ್ನು ನನಗೆ ನೀಡಿ.'' ಅವರು ಸ್ವಲ್ಪ ಹೊತ್ತು ಜಪಮಾಡಿ, ನನಗೆ ಅದನ್ನು ಕೊಟ್ಟರು. ನಾನು ಅದನ್ನು ಸ್ವೀಕರಿಸಿ, ನನ್ನ ಕತ್ತಿನಲ್ಲಿ ಧರಿಸಿಕೊಂಡೆ. ಶ್ರೀಮಾತೆಯವರು ಹೇಳಿದರು, ''ನೀನು ಅದನ್ನು ಕೈಯಲ್ಲಿ ಹಿಡಿದು, ಅದರಲ್ಲಿ ಸ್ವಲ್ಪ ಹೊತ್ತು ಜಪ ಮಾಡು.'' ನಾನು ತುಟಿಗಳನ್ನು ಅಲುಗಾಡಿಸದೆ ಆ ಜಪಮಾಲೆಯೊಂದಿಗೆ ಸ್ವಲ್ಪ ಹೊತ್ತು ಶ್ರೀರಾಮಕೃಷ್ಣರ ಜಪ ಮಾಡಿದೆ. ಇಪ್ಪತ್ತು ಬಾರಿ ನಾನು ಜಪ ಮಾಡಿ ಮುಗಿಸಿದಾಗ, ಅವರು ಬಂಗಾಳಿಯಲ್ಲಿ ಹೇಳಿದರು, ''ಅಲ್ಲ, ಅದಲ್ಲ. ಇನ್ನೊಂದು ಮಂತ್ರದ ಜಪ ಮಾಡು.'' ಅವರು ಹೇಳಿದುದು ಅರ್ಥವಾಯಿತು ಎನ್ನುವಂತೆ ನಾನು ತಲೆ ಅಲ್ಲಾಡಿಸಿದೆ. ಆದರೆ ಇನ್ನೂ ಶ್ರೀರಾಮಕೃಷ್ಣರ ಮಂತ್ರ ಜಪವನ್ನೇ ನಾನು ಮುಂದುವರಿಸಿದೆ. ಆದರೆ ಅದಕ್ಕೆ ಅವರೇನೂ ಆಕ್ಷೇಪಿಸಲಿಲ್ಲ. ಆದ್ದರಿಂದ ಶ್ರೀಮಾತೆಯವರು ಅದಕ್ಕೆ ಸಮ್ಮತಿ ನೀಡಿದರೆಂದು ನಾನು ಭಾವಿಸಿದೆ. ಶ್ರೀರಾಮಕೃಷ್ಣರ ಮಂತ್ರವನ್ನು ಒಂದು ಬೀಜಾಕ್ಷರದೊಂದಿಗೆ ಮಾಡಿ ಮುಗಿಸಿದ ನಂತರ, ಶ್ರೀಮಾತೆ ನೀಡಿದ ಬೀಜಾಕ್ಷರದೊಂದಿಗೆ ಅವರು ಹೇಳಿದಂತೆ ಜಪಿಸಿದೆ. ಬಳಿಕ ನಾನು ಶ್ರೀಮಾತೆಯವರಿಗೆ ನಮಸ್ಕಾರ ಮಾಡಿದೆ. ಅವರು ನನ್ನ ಮೇಲೆ ಕೃಪೆ ತೋರಿದಂತೆ ನನಗನ್ನಿಸಿತು. ಹೀಗೆ, ಅವರಿಗೆ ಏನನ್ನಾದರೂ ಹೇಳುವ ಮೊದಲೇ ಅವರಿಗೆ ಎಲ್ಲವೂ ತಿಳಿದಿರುತ್ತದೆ ಎಂದು ಭಾಸವಾಯಿತು.

ಶ್ರೀಮಾತೆಯವರು ನನ್ನ ಕೈಗೆ ಹಾಕಿದ ತೀರ್ಥವನ್ನು ನನಗೆ ಕುಡಿಯಲಾಗಲಿಲ್ಲ! ಅಂಥ ಮಹಾಭಾಗ್ಯವನ್ನು ನನಗೆ ದೊರಕಿಸಿಕೊಳ್ಳಲಾಗಲಿಲ್ಲ! ಎಂಥ ದುರದೃಷ್ಟ! ಇಂಥ ಆಲೋಚನೆಗಳಿಂದ ನಾನು ತುಂಬಾ ದುಃಖಿತನಾದೆ. ಬಳಿಕ ಶ್ರೀಮಾತೆಯವರ ಕೃಪೆಯಿಂದ ಒಂದು ದಿನ ನನಗೊಂದು ಆಲೋಚನೆ ಬಂತು. ಅವರ ಪಾದಗಳನ್ನು ತೊಳೆದ ನೀರಿಗಾಗಿ ನಾನು ಪ್ರಾರ್ಥಿಸುತ್ತೇನೆ. ಅವರು ನನ್ನ ಪ್ರಾರ್ಥನೆಯನ್ನು ನೆರವೇರಿಸಿದರೆ, ನಾನು ಅತ್ಯಂತ ಧನ್ಯನಾಗುತ್ತೇನೆ. ಹೀಗೆ, ಅವರಿಂದ ಪಡೆದ ತೀರ್ಥವನ್ನು ಕುಡಿಯ

ಲಾಗಲಿಲ್ಲ ಎಂಬ ನನ್ನ ದುಃಖವು ಸಂಪೂರ್ಣವಾಗಿ ಮಾಯವಾಗುವುದು; ಅಲ್ಲದೆ ನಾನು ತೀರ್ಥವನ್ನು ಇನ್ನಿತರ ಭಕ್ತರುಗಳಿಗೂ ನೀಡಬಹುದು. ಅದು ನನಗೂ, ಅವರಿಗೂ ಅನುಗ್ರಹವಾಗುವುದು. ಈ ಕಾರಣಕ್ಕಾಗಿ ನಾನು ಗಂಗಾಜಲವನ್ನು ಜಾಗರೂಕತೆಯಿಂದ ಶೋಧಿಸಿದೆ–ಅದು ಪೂರ್ಣವಾಗಿ ಶುದ್ಧವಾಗಲಿ ಎಂದು. ಎರಡು ಔನ್ಸಿನ ಬಾಟಲಿಯಲ್ಲಿ ಅದನ್ನು ತುಂಬಿದೆ. ಒಂದು ದಿನ ಬೆಳಿಗ್ಗೆ ನಾನು 'ಉದ್ಬೋಧನ ಕಾರ್ಯಾಲಯ'ಕ್ಕೆ ಹೋಗಿ ಮ್ಯಾನೇಜರ್‌ಗೆ ಹೇಳಿದೆ: ''ನನಗೊಂದು ಶುದ್ಧವಾದ, ತಳದಲ್ಲಿ ಅಗಲವಾಗಿರುವ ಪಾತ್ರೆ ಬೇಕು. ಯಾಕೆ ಎಂದು ಅನಂತರ ಹೇಳುತ್ತೇನೆ.'' ಅವರು ಅಂಥ ಒಂದು ಪಾತ್ರೆಯನ್ನು ನನಗೆ ನೀಡಿ ಉಪಕಾರ ಮಾಡಿದರು. ನಾನು ಅದನ್ನು ತೆಗೆದುಕೊಂಡು ಮ್ಯಾನೇಜರ್ ಹಾಗೂ ನನ್ನ ತಮ್ಮನೊಂದಿಗೆ ಶ್ರೀಮಾತೆಯವರ ಬಳಿಗೆ ಹೋದೆ. ಅನಂತರ ಶ್ರೀಮಾತೆಯವರ ಬಳಿ ನನ್ನದೊಂದು ಕೋರಿಕೆಯಿದೆ ಎಂದು ಅವರಿಗೆ ತಿಳಿಸುವಂತೆ ಮ್ಯಾನೇಜರಿಗೆ ಹೇಳಿದೆ. ಮ್ಯಾನೇಜರ್ ಅದನ್ನು ಅವರಿಗೆ ತಿಳಿಸುವ ಮೊದಲೇ ಶ್ರೀಮಾತೆಯವರು ಕಾಲು ಚಾಚಿದರು. ನಾನು ಅವರ ಪಾದಗಳ ಕೆಳಗೆ ಪಾತ್ರೆಯನ್ನಿಟ್ಟೆ. ಬಾಟಲಿಯಿಂದ ಗಂಗಾಜಲವನ್ನು ಅವರ ಪಾದಗಳಿಗೆ ಭಕ್ತಿಪೂರ್ವಕವಾಗಿ ಎರೆದೆ. ನಾನು ಮನಸ್ಸಿನಲ್ಲಿ ಯೋಚಿಸಿದೆ: ''ಅಮ್ಮ, ನಾನು ಇಷ್ಟನ್ನು ಮಾತ್ರ ಮಾಡಬಲ್ಲೆ.'' ಆಗ ಅವರು ನನ್ನ ಕಡೆಗೆ ಪ್ರೀತಿಪೂರ್ವಕವಾಗಿ ತಿರುಗಿ, ತೀರ್ಥವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು, ಸ್ವಲ್ಪ ಹೊತ್ತು ಜಪ ಮಾಡಿ, ಬಳಿಕ ಪವಿತ್ರ ಜಲವನ್ನು ತಮ್ಮ ಪಾದಗಳಿಗೇ ಸುರಿದರು. ಅವರು ಈ ರೀತಿ ಮೂರು ಸಲ ಮಾಡಿ, ಬಳಿಕ ತೀರ್ಥವನ್ನು ತೆಗೆದುಕೊಳ್ಳಲು ನನಗೆ ಹೇಳಿದರು. ನಾನು ಅತ್ಯಂತ ಭಾಗ್ಯಶಾಲಿಯೆಂದು ನನಗನ್ನಿಸಿತು. ಪಾತ್ರೆಯನ್ನು ಅವರ ಪಾದಗಳ ಕೆಳಗಿನಿಂದ ಸರಿಸಿ, ಶ್ರೀಮಾತೆಯವರ ಪಾದಗಳನ್ನು ಗುಲಾಬಿ ಬಣ್ಣದ ಟವೆಲ್‌ನಿಂದ ಒರೆಸಿದೆ. ಅನಂತರ ನಾನು ಅವರ ಮುಂದೆ ನಮಸ್ಕರಿಸಿದೆ. ಶ್ರೀಮಾತೆಯವರು ಮೃದುವಾಗಿ ಮ್ಯಾನೇಜರ್‌ಗೆ ಹೇಳಿದರಂತೆ, ''ನೋಡು, ಇವನು ಎಲ್ಲವನ್ನೂ ಎಷ್ಟೊಂದು ಭಕ್ತಿಪೂರ್ವಕವಾಗಿ ಮಾಡುತ್ತಾನೆ!'' ಎಂದು. ಅದೆಲ್ಲವೂ ಅವರ ಕೃಪೆಯಿಂದಾಗಿಯೇ. ನಾನು ಒಂದಿಷ್ಟು ತೀರ್ಥವನ್ನು ನನ್ನ ತಮ್ಮನಿಗೆ ಕುಡಿಯಲು ಕೊಟ್ಟೆ. ನಾನೂ ಒಂದಿಷ್ಟನ್ನು ಕುಡಿದೆ. ಉಳಿದ ತೀರ್ಥವನ್ನು ನಾನು ಬಾಟಲಿಯಲ್ಲಿ ಸುರಕ್ಷಿತವಾಗಿ ಇಟ್ಟೆ. ಸಂಜೆ ಮತ್ತೊಮ್ಮೆ ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ನಾವು ಬೇಲೂರು ಮಠಕ್ಕೆ ಮರಳಿದೆವು.

ಆ ತೀರ್ಥವನ್ನು ನಾನು ಬಾಟಲಿಯಲ್ಲಿ ಸುರಕ್ಷಿತವಾಗಿ ಇನ್ನೂ ಇಟ್ಟುಕೊಂಡಿದ್ದೇನೆ. ಅದನ್ನು ಸಾವಿರಾರು ಮಂದಿ ಭಕ್ತರಿಗೆ ಹಂಚಲಾಗುತ್ತಿದೆ. ನಾನು ಇತರರಿಗೆ ಹಂಚಬಹುದಾದ ಶ್ರೀಮಾತೆಯವರ ಮೂರ್ತರೂಪದ ಕೃಪೆ ಎಂದರೆ ಇದೊಂದೇ.

ನಾವು ನಮ್ಮ ಮನೆಗೆ ಮರಳುವ ದಿನವನ್ನು ನಿಶ್ಚಯಿಸಿಕೊಂಡ ನಂತರ, ಒಂದು ದಿನ ನಾವೆಲ್ಲ 'ಉದ್ಬೋಧನ'ಕ್ಕೆ ಹೋದೆವು. ಶ್ರೀಮಾತೆಯವರಿಂದ ಬೀಳ್ಕೊಳ್ಳುವುದಕ್ಕಾಗಿ. ಅನೇಕ ವಿಷಯಗಳನ್ನು ಕೇಳಿದ ಬಳಿಕ ಅವರು, ''ನೀನು ನನ್ನನ್ನು ನೋಡಲು ಮತ್ತೆ ಬರುವುದಿಲ್ಲವೆ?'' ಎಂದರು. ಅಂಥ ಪ್ರಶ್ನೆಗೆ ಉತ್ತರ ನೀಡಲು ನನಗೆ ಸಾಧ್ಯವಾಗಲಿಲ್ಲ. ನನ್ನ ಬಳಿ ಹಣವಿರಲಿಲ್ಲ. ಈ ಬಾರಿ ಅಲ್ಲಿಗೆ ಹೋಗಲು ಸಾಧ್ಯವಾದುದು ಸಾಕಷ್ಟು ಕಷ್ಟಪಟ್ಟು ಹಣ ಸಂಗ್ರಹಿಸಿದ್ದರಿಂದ. ಇಂಥ ಅವಕಾಶ ಮತ್ತೆ ಸಾಧ್ಯವಾಗುವುದಾದರೂ ಹೇಗೆ? ಹೀಗೆ ಕೆಲವು ನಿಮಿಷ ಯೋಚಿಸುತ್ತಿದ್ದು, ಬಳಿಕ ಕೈಮುಗಿದು ಹೇಳಿದೆ; ''ಆಗಲಿ, ಅಮ್ಮಾ, ನಾನು ಬರುತ್ತೇನೆ.'' ಶ್ರೀಮಾತೆಯವರು ಆಗಲೇ ನನ್ನ ಆಲೋಚನೆಯನ್ನು ಅರಿತಿದ್ದರೆಂದು ನನಗನ್ನಿಸಿತು. ನನ್ನ ಉತ್ತರದಿಂದ ಅವರು ಸಂತಸಗೊಂಡರು.

ಮರುದಿನ ಅಂದರೆ ನಾವು ಊರಿಗೆ ಹೊರಡುವ ದಿನ ನಾವು ಕಲ್ಕತ್ತೆಗೆ ಹೋದೆವು. ಶ್ರೀರಾಮಕೃಷ್ಣರನ್ನು ಕಾಣುವ ಅಪೂರ್ವ ಭಾಗ್ಯ ಪಡೆದಿದ್ದ ಭಕ್ತರೊಬ್ಬರ ಆಹ್ವಾನದ ಮೇರೆಗೆ ಅವರ ಭೇಟಿ ಮಾಡಿದೆವು.

ಅನಂತರ ನಮಗೆ ಮೂರು ಗಂಟೆ ಕಾಲ ಬಿಡುವಿತ್ತು. ಈ ಅವಕಾಶವನ್ನು ಶ್ರೀಮಾತೆಯವರ ಭೇಟಿಯಾಗಿ, ಮತ್ತೊಮ್ಮೆ ಅವರಿಂದ ಬೀಳ್ಕೊಳ್ಳಲು ನಾವು ಬಳಸಿಕೊಂಡೆವು. ಇದರಿಂದ ಅವರಿಗೆ ಅತ್ಯಂತ ಆನಂದವಾಯಿತು. ಕೂಡಲೇ ನಾವು ನಮ್ಮ ಸ್ವಂತ ಊರಿಗೆ ಮರಳಲಿದ್ದೆವು. ಆದರೆ ಶ್ರೀಮಾತೆ ಈ ಬಾರಿ ಮತ್ತೊಮ್ಮೆ, ''ನೀನು ಮತ್ತೆ ಬರುವುದಿಲ್ಲವೆ?'' ಎಂದು ಕೇಳಲಿಲ್ಲ.

ಶ್ರೀಮಾತೆಯವರ ಭೇಟಿಯಾಗಿ ಕೆಲವು ವರ್ಷಗಳಾದ ನಂತರ ನಾನು ಯೋಚಿಸಿದೆ: 'ರಾಸಬಿಹಾರಿ ಮಹಾರಾಜರಿಗೆ ಒಂದೂವರೆ ರೂಪಾಯಿ ಕಳುಹಿಸಿಕೊಟ್ಟು, ಒಂದು ರೂಪಾಯಿಗೆ ಕಲ್ಲುಸಕ್ಕರೆ ಕೊಂಡುಕೊಂಡು, ಅದನ್ನು ಶ್ರೀಮಾತೆಯವರ ಮೂಲಕ ಶ್ರೀರಾಮಕೃಷ್ಣರಿಗೆ ನೈವೇದ್ಯ ಮಾಡಿಸಿ, ಅದರ ಪ್ರಸಾದದಲ್ಲಿ ಒಂದಿಷ್ಟನ್ನು ನನಗೆ ಕಳುಹಿಸಿಕೊಟ್ಟರೆ ಒಳ್ಳೆಯದಲ್ಲವೆ?' ಎಂದು. ಆದರೆ ನನ್ನ ಸಂಬಳ ಬಂದ ಕೂಡಲೇ ಹಣವೆಲ್ಲ ಖರ್ಚಾಗಿ, ಅದನ್ನು ಮಾಡಲು ಮರೆಯುತ್ತಿದ್ದೆ. ಹೀಗೆಯೇ ಆರು ತಿಂಗಳು ಕಳೆದವು. ನನ್ನ ಆಸೆಯನ್ನು ಪೂರೈಸಲಾಗಲೇ ಇಲ್ಲ. ಒಂದು ವಿಶೇಷವಾದ ಪವಿತ್ರ ದಿನದಂದು ನಾನು ಶ್ರೀಮಾತೆಯವರ ಪೂಜೆ ಮುಗಿಸಿ ಬಂದಾಗ, ನನಗೆ ಎರಡು ಪತ್ರಗಳು ಬಂದಿದ್ದವು. ಕೈಬರಹವನ್ನು ನೋಡಿಯೇ ತಿಳಿದೆ, ಅದು ಸ್ವಾಮಿ ವಿಶುದ್ಧಾನಂದರದೆಂದು. ಒಂದು ಪತ್ರವನ್ನೋದಿದೆ. ಇನ್ನೊಂದನ್ನು ಒಡೆದಾಗ ಅದರಲ್ಲಿ ಒಂದು ಪೊಟ್ಟಣವಿತ್ತು. 'ಶ್ರೀಮಾತೆಯವರ ಪ್ರಸಾದ' ಎಂದು ಅದರಲ್ಲಿ ಬರೆದಿತ್ತು. ಅದರಲ್ಲಿ ಒಂದಿಷ್ಟು ಕಲ್ಲುಸಕ್ಕರೆಯಿದ್ದವು. ನನ್ನ ಆನಂದಕ್ಕೆ ಪಾರವೇ ಇಲ್ಲ! ಭಕ್ತರ ವ್ಯಾಕುಲ ಹೃದಯದ ಆಸೆಯನ್ನರಿತು ಅದನ್ನು ಪೂರೈಸುವ ಶ್ರೀಮಾತೆಯವರ ದಿವ್ಯದೃಷ್ಟಿ ಹಾಗೂ ಶಕ್ತಿಸಾಮರ್ಥ್ಯಗಳ ನಿಜವಾದ ಗುರುತು ಅದಾಗಿತ್ತು.